ಓ ಎಸ್.   11/2021                                                          ಪಿಡಬ್ಲ್ಯೂ : 1 -ಪಿ. ಜಿನೇಶ್

ದಿನಾಂಕಃ 12.06.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ : ಶ್ರೀ ಎಂ ಎಸ್ ಕೆ  ವಕೀಲರಿಂದಃ

ಬ್ಲ್ಯೂ ವ್ಯಾಲಿ ಅವರು ನನಗೆ ಬರೆದುಕೊಟ್ಟ ಅಗ್ರಿಮೆಂಟ್ ಆಫ್ ಅಲಾಟ್ ಮೆಂಟ್ ಅನ್ನು ನಿಪಿ 1 ಎಂದು, ನಿಪಿ1 ರಲ್ಲಿ ಬ್ಲ್ಯೂ ವ್ಯಾಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಆದ ಸೂರ್ಯ ನಾರಾಯಣ ರಾಜು ಪ್ರತಿಪುಟದಲ್ಲೂ ಸಹಿ ಮಾಡಿರುತ್ತಾರೆ. ನಿಪಿ1 ರಲ್ಲಿ ನಾನು ಸಹ ಪ್ರತಿಪುಟದಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ1 ಅನ್ನು ನೋಡಿ ತಮ್ಮ ಸಹಿಯನ್ನು ಪ್ರತಿ ಪುಟದಲ್ಲಿ ಗುರುತಿಸಿದ್ದು, ಸಾಕ್ಷಿ ಕೊನೆಯ ಪುಟದಲ್ಲಿ ಗುರುತಿಸಿದ ಅವರ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಗಿದೆ. ನಿಪಿ1 ರಲ್ಲಿ ಸಾಕ್ಷಿ ಸಹಿಯಾಗಿ ಸುನೀಲ್ ಎಸ್ ಕೊಟಾರಿ ಸಹಿ ಮಾಡಿರುತ್ತಾರೆ. ಪ್ರತಿವಾದಿ ನಮಗೆ ನೀಡಿರುವ ನೋಟೀಸನ್ನು ನಿಪಿ 2 ಎಂದು ಗುರುತಿಸಲಾಗಿದೆ. ಪ್ರತಿವಾದಿ ನೀಡಿರುವ clearance certificate ಅನ್ನು ನಿಪಿ 3 ಎಂದು, ನನ್ನ ವಕೀಲರ ಮೂಲಕ ಪ್ರತಿವಾದಿಗೆ ನೀಡಿದ ಲೀಗಲ್ ನೋಟೀಸ್ ನ ಕಚೇರಿ ಪ್ರತಿಯನ್ನು ನಿಪಿ 4 ಎಂದು, ಅದರ ಅಂಚೆ ರಶೀದಿಗಳನ್ನು ನಿಪಿ4(ಎ) ರಿಂದ ನಿಪಿ4(ಸಿ) ಎಂದು ಗುರುತಿಸಲಾಗಿದೆ. ಪ್ರತಿವಾದಿ ಸದರಿ ಲೀಗಲ್ ನೋಟೀಸನ್ನು ಪಡೆದ ಸ್ವೀಕೃತಿ ಪತ್ರವನ್ನು ನಿಪಿ 5 ರಿಂದದ 7 ಎಂದು ಗುರುತಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.